ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ,
ಉಡುಪಿ.

ಸಿ.ಸಿ.:55/2021
ಸಿ.ಡಬ್ಲ್ಯು. 2 ಪಿ.ಡಬ್ಲೂ : 1

| | |
|---|---|
| ಸಾಕ್ಷಿದಾರರ ಹೆಸರು | ಮಹಮ್ಮದ್ ಇಮ್ರಾನ್ |
| ತಂದೆಯ ಹೆಸರು | ಶಬ್ಬೀರ್ |
| ವಯಸ್ಸು | 44 ವರ್ಷ |
| ಉದ್ಯೋಗ | ಚಾಲಕ |
| ವಾಸಸ್ಥಳ | ಉಡುಪಿ |

ದಿನಾಂಕಃ 23-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ಚಾಸಾ 1, 3 ರಿಂದ 5 ರವರ ಪರಿಚಯ ಇರುವುದಿಲ್ಲ. ಆರೋಪಿತರ ಪರಿಚಯ ಇರುವುದಿಲ್ಲ. ಅವರನ್ನು ಈ ಹಿಂದೆ ನಾನು ನೋಡಿರುವುದಿಲ್ಲ. ಭಾವಚಿತ್ರದಲ್ಲಿ ಕಾಣುವ ವಾಹನದಲ್ಲಿ ನಾನು ಮತ್ತು ಚಾಸಾ 1 ರವರು ಹೋಗುವ ವೇಳೆ ಆರೋಪಿತರು ನಮ್ಮನ್ನು ಅಡ್ಡಗಟ್ಟಿ ಚಾಸಾ 1 ರವರಿಗೆ ಕೈಯಿಂದ ಹಲ್ಲೆ ಮಾಡಿರುವುದಿಲ್ಲ ಮತ್ತು ಪೆಟ್ರೋಲ್ ಸುರಿದು ಹಲ್ಲೆ ಮಾಡಿರುವುದಿಲ್ಲ. ಚಾಸಾ ರವರಿಗೆ ಸೇರಿದ ವಾಹನವನ್ನು ಹಾಳು ಮಾಡಿ ನಷ್ಟ ಉಂಟು ಮಾಡಿರುವುದಲ್ಲ. ಚಾಸಾ 1 ರವರನ್ನು ಅಪಹರಿಸಿ ಜೀವ ಬೆದರಿಕೆಯನ್ನು ಹಾಕಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಘಟನೆ ನಡೆದಿರುವುದಿಲ್ಲ. ಪೊಲೀಸಿನವರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿ ಕೂಲ ಸಾಕ್ಷಿ ಎಂದು ತಿಳಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ ಅನುಮತಿಯನ್ನು ನೀಡಲಾಯಿತು.

**ಪಾಟೀ ಸವಾಲುಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ 06-07-2021 ರಂದು ಚಾಸಾ 1ರವರು ಮಾಂಸ ಮಾರಾಟ ಮಾಡುವ ಉದ್ದೇಶದಿಂದ ಹಿರಿಯಡ್ಕದಲ್ಲಿ ಒಂದು ದನವನ್ನು ಚಾಸಾ 6ರವರಿಂದ ಖರೀದಿ ಮಾಡಿ ಕೆಎ 07 5094 ಪಿಕಪ್ ವಾಹನದಲ್ಲಿ ತೆಗೆದುಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ಆ ವಾಹನವನ್ನು ನೀವೇ ಚಾಲನೆ ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ರಾಂಪುರ ಬಳಿ ಹೋಗುತ್ತಿದ್ದಾಗ ಇಟಿಯಾಸ್ ಕಾರಿನಲ್ಲಿ ಆರೋಪಿತರು ನಿಮ್ಮನ್ನು ಹಿಂಬಾಲಿಸಿಕೊಂಡು ಬಂದು ನಿಮ್ಮ ವಾಹನವನ್ನು ಅಡ್ಡಗಟ್ಟಿ ನಿಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಹಸುವನ್ನು ಕಳ್ಳತನ ಮಾಡಿ ತೆಗೆದುಕೊಂಡು ಹೋಗುತ್ತಿದ್ದೀರಿ ಎಂದು ಕೈಯಿಂದ ಚಾಸಾ 1ರವರಿಗೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಪಿಕಪ್ ವಾಹನವನ್ನು ಜಖಂ ಮಾಡಿ ನಷ್ಟ ಉಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ 1 ರವರನ್ನು ಆರೋಪಿತರು ಅವರ ಕಾರಿನಲ್ಲಿಯೇ ಅಪಹರಿಸಿಕೊಂಡು ಹೋಗಿ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಚಾಸಾ 1ರವರು ದೂರು ನೀಡಿದ್ದು ನಿಮ್ಮನ್ನು ಪೊಲೀಸಿನವರು ವಿಚಾರಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 25-07-2021ರ ಹೇಳಿಕೆಯನ್ನು ಸಾಕ್ಷಿಯವರಿಗೆ ಓದಿ ಹೇಳಿದ್ದು ನಿರಾಕರಿಸಿರುತ್ತಾರೆ. ಹೇಳಿಕೆಯನ್ನು ನಿಪಿ 1 ಎಂದು ಗುರುತಿಸಲಾಯಿತು. ಘಟನೆಯ ಬಗ್ಗೆ ನಿಮಗೆ ತಿಳಿದಿದ್ದರೂ ಆರೋಪಿಯವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಯವರ ಪರ ಶ್ರೀ ಪಿ. ಎಂ ಪಿ ವಕೀಲರಿಂದಃ**

ಪಾಟೀ ಸವಾಲು ಇಲ್ಲವೆಂದು ಮನವಿ ಮಾಡಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಸಿಜೆಎಂ ಉಡುಪಿ.